20

# ಒಳ್ಳೇ ಕುರುಬನು

## (10:1-21)

ನಮ್ಮಲ್ಲಿ ಹೆಚ್ಚಾದವರು ನಮ್ಮ ಮನಸ್ಸುಗಳಲ್ಲಿಟ್ಟುಕೊಂಡಿರುವ ದೇವರ ಬಗೆಗಿನ ಮಾನಸಿಕ ಚಿತ್ರವು ದೇವರು ನಮ್ಮ ಕುರುಬನಂತೆ ಇರುವ ಚಿತ್ರವಾಗಿದೆ. ಅದು ಸಂರಕ್ಷಣೆಯ, ಪಾಲನೆಯ, ಕರುಣೆಯ ಮತ್ತು ತ್ಯಾಗದ ರೂಪವಾಗಿದೆ. ದೇವರನ್ನು ಒಬ್ಬ ಕುರುಬನಿಗೆ ಮತ್ತು ನಮ್ಮನ್ನು ಕುರಿಗಳೊಂದಿಗೆ ಹೋಲಿಸುವದರ ಬಗ್ಗೆ ಕೆಲವೊಂದು ವಿಶೇಷವಾಗಿ ಯೋಗ್ಯವಾದದ್ದಾಗಿದೆ. ಉದಾಹರಣೆಗಾಗಿ, ಕುರಿಗಳಿಗೆ ಮಂದ ದೃಷ್ಟಿ ಇರುತ್ತದೆ ಮತ್ತು ದಿಕ್ಕಿನ ತಿಳಿಯುವಿಕೆ ಇರುವದಿಲ್ಲ. ವೈರಿಗಳಿಗೆ ದಾಳಿಮಾಡಲ್ಪಡುವಾಗ ಅವು ನಿಜವಾಗಿಯೂ ದಿಕ್ಕಿಲ್ಲದವುಗಳಾಗುತ್ತವೆ. ಭಯಗೊಂಡಾಗ, ತಮ್ಮ ಕಾಲುಗಳನ್ನು ಕೆಳಗೆ ಮಡಿಚಿಕೊಂಡು ಸುಮ್ಮನೇ ಕುಳಿತು ಬಿಡುತ್ತವೆ. ಕುರಿಗಳು ವರ್ತಿಸುವ ರೀತಿಯಲ್ಲಿ ಕೆಲವು ಸಲ ಅವಿವೇಕಿಗಳಂತೆ ಕಾಣುತ್ತವೆ. ಕುರಿಗಳು ಹೊಲದಲ್ಲಿರುವಾಗ, ಒಂದು ಕುರಿ ಕಲ್ಪಿತ ಆತಂಕದ ಮೇಲೆ ಜಿಗಿದರೆ, ಇತರ ಪ್ರತಿಯೊಂದು ಕುರಿಯೂ ಅದೇ ಅಸ್ತಿತ್ವದಲ್ಲಿ ಇಲ್ಲದ ಬೊಡ್ಡೆಯ ಮೇಲೆ ಇಲ್ಲವೇ ಬೇಲಿಯ ಮೇಲೆ ಜಿಗಿದು ಹೋಗುತ್ತವೆ. ಅನೇಕ ಸಲ, ಕುರುಬರು ಕುರಿಗಳ ಹುಲ್ಲುಗಾವಲುಗಳೊಳಗೆ ಹೋಗಿ, ಅವು ಬಾಯಾರಿಕೆಯಿಂದ ಸತ್ತು ಹೋಗುವದನ್ನು ತಪ್ಪಿಸಲು ನೀರಿರುವ ತೊಟ್ಟಿಗಳಿಗೆ ಕರೆದು ಕೊಂಡು ಹೋಗುತ್ತಾರೆ. ಕುರಿಗಳಿಗೆ ಸಹಾಯದ ಅಗತ್ಯತೆಯಿದೆ ಮತ್ತು ನಮಗೂ ಅಗತ್ಯವಿದೆ!

"ಕುರುಬ" ಎಂಬುದಕ್ಕೆ ಯಾವಾಗಲೂ ಸಕಾರಾತ್ಮಕ ವಿಚಾರವಿರುವದಿಲ್ಲ. ಕೆಲವು ಸಂಸ್ಕೃತಿಗಳಲ್ಲಿ, ಕುರುಬರು ಮೈಗಳ್ಳ ಕುಡುಕರಂತೆ ಮತ್ತು ಜವಾಬ್ದಾರಿಕೆಯಿಲ್ಲದ ತೋಟದ ಕೆಲಸದವರಂತೆ - ಪ್ರಸಿದ್ಧರಾಗಿದ್ದಾರೆ. "ತಂದೆ" ಎಂಬ ಪದಕ್ಕೆ ಅತ್ಯುತ್ತಮ ಸದ್ಗುಣ ಇಲ್ಲವೇ ಅತಿ ಕೆಟ್ಟ ದುರ್ಗುಣದ ಅರ್ಥವಿದ್ದಂತೆ, "ಕುರುಬ" ಎಂಬುದು ಉತ್ತಮವಾದದ್ದು ಇಲ್ಲವೇ ನಾಚಿಕೆಗೇಡಿನದು ಆಗಿರುತ್ತದೆ. ಉದಾಹರಣೆಗಾಗಿ, 23ನೆಯ ಕೀರ್ತನೆಯು ಜೋಪಾಸನೆ ಮಾಡುವ ಕುರುಬನಂತೆ ದೇವರ ಸುಂದರವಾದ ಚಿತ್ರವನ್ನು ಕೊಡುತ್ತದೆ. ಇದಕ್ಕೆ ವಿರುದ್ಧವಾಗಿ ದುಷ್ಟ ಕುರುಬರ ಬಗ್ಗೆ ಹಳೇ ಒಡಂಬಡಿಕೆಯ ಇಬ್ಬರು ಪ್ರವಾದಿಗಳಿಂದ ಈ ವಿವರಣೆಗಳು ಕೊಡಲ್ಪಟ್ಟಿವೆ:

> ಅರಣ್ಯದ ಸಕಲ ಮೃಗಗಳೇ,
> ಕಾಡಿನ ಎಲ್ಲಾ ಜಂತುಗಳೇ,
> ನುಂಗಿ ಬಿಡುವದಕ್ಕೆ ಬನ್ನಿರಿ!
> ಇವರ ಕಾವಲುಗಾರರು ಕುರುಡರು,
> ಇವರಲ್ಲಿ ಯಾರಿಗೂ ತಿಳುವಳಿಕೆಯಿಲ್ಲ;
> ಇವರೆಲ್ಲರೂ ಬೊಗಳಲಾರದ ಮೂಗನಾಯಿಗಳು,
> ನಿದ್ರೆಯನ್ನಾಶಿಸಿ ಮಲಗಿಕೊಂಡು ಕನವರಿಸುವ ನಾಯಿಗಳು.
> ಮತ್ತು ಇವು ಹೊಟ್ಟೆಬಾಕ ನಾಯಿಗಳು, ಇವುಗಳಿಗೆ ಎಂದಿಗೂ ಸಾಕು ಎನಿಸದು,
> ಇಂಥವರು ಕುರಿಗಳನ್ನು ಕಾಯತಕ್ಕವರೋ! ಬುದ್ಧಿಹೀನರಾಗಿದ್ದಾರೆ,
> ಇವರಲ್ಲಿ ಯಾವನೂ ತಪ್ಪದೆ ಪ್ರತಿಯೊಬ್ಬನೂ ಕೊಳ್ಳೆಹೊಡೆಯಬೇಕೆಂದು ತನ್ನ ತನ್ನ
> ಮಾರ್ಗಕ್ಕೆ ತಿರುಗಿಕೊಂಡಿದ್ದಾನೆ.

ಬನ್ನಿರಿ, ನಾನು ದ್ರಾಕ್ಷಾರಸವನ್ನು ತರಿಸುವೆನು, ಬೇಕಾದಷ್ಟು ಮದ್ಯವನ್ನು ಕುಡಿಯುವ; ನಾಳೆಯೂ ಈ ದಿನದಂತೆ ಕೇವಲ ಅತ್ಯಂತ ವಿಶೇಷ ದಿನವಾಗಿರುವದು [ಎಂದು ಹರಟಿಕೊಳ್ಳುವರು] (ಯೆಶಾಯ 56:9-12).

ನನ್ನ ಕಾವಲಿನ ಕುರಿಗಳನ್ನು ಚದರಿಸಿ ಹಾಳು ಮಾಡುವ ಕುರುಬರ ಗತಿಯನ್ನು ಏನೆಂದು ಹೇಳಲಿ ಎಂಬುದು ಯೆಹೋವನ ನುಡಿ: ಇಸ್ರಾಯೇಲ್ಯರ ದೇವಾರಾದ ಯೆಹೋವನು ತನ್ನ ಜನರೆಂಬ ಕುರಿಗಳನ್ನು ಮೇಯಿಸುವ ಕುರುಬರ ದ್ರೋಹ ವನ್ನು ಕಂಡು ಅವರನ್ನು ಕುರಿತು ಇಂತೆನ್ನುತ್ತಾನೆ - ನೀನು ನನ್ನ ಮಂದೆಯನ್ನು ಚದರಿಸಿ ಅಟ್ಟಿ ಬಿಟ್ಟಿದ್ದೀರಿ, ವಿಚಾರಿಸಲೇ ಇಲ್ಲ; ಆಹಾ, ನಿಮ್ಮ ದುಷ್ಕೃತ್ಯಗಳ ನಿಮಿತ್ತ ನಾನು ನಿಮ್ಮನ್ನು ವಿಚಾರಿಸುವೆನು; ನಾನು ನನ್ನ ಮಂದೆಯನ್ನು ಯಾವ ದೇಶಗಳಿಗೆ ಅಟ್ಟಿಬಿಟ್ಟೆನೋ ಆ ಸಕಲ ದೇಶಗಳಿಂದ ಉಳಿದ ಕುರಿಗಳನ್ನು ಕೂಡಿಸಿ ತಮ್ಮ ತಮ್ಮ ಹಟ್ಟಿಗಳಿಗೆ ತಿರುಗಿ ಬರಮಾಡುವೆನು; ಅವು ದೊಡ್ಡ ಪೀಳಿಗೆಯಾಗಿ ಹೆಚ್ಚುವವು. ನಾನು ಅವುಗಳ ಮೇಲೆ ಕುರುಬರನ್ನು ನೇಮಿಸುವೆನು; ಅವರು ಅವುಗಳನ್ನು ಮೇಯಿಸುವರು; ಅವು ಇನ್ನು ಭಯಪಡವು, ಬೆದರವು, ಅವುಗಳಲ್ಲಿ ಒಂದೂ ಕಡಿಮೆಯಾಗದು; ಇದು ಯೆಹೋವನ ನುಡಿ (ಯೆರೆಮೀಯ 23:1-4).

ಯೋಹಾನ 10ನೆಯ ಅಧ್ಯಾಯವು "ಒಳ್ಳೇ ಕುರುಬನ ಅಧ್ಯಾಯ ಎಂದು ಕರೆಯ ಲ್ಪಟ್ಟಿದೆ" ಯೇಸುವು ಹುಟ್ಟು ಕುರುಡನನ್ನು ಗುಣಪಡಿಸಿದ ಕಥೆಯ ಮತ್ತು ಯೇಸುವಿನ ವಿರೋಧಿಗಳ ಆತ್ಮಿಕ ಕುರುಡುತನದ ಚರ್ಚೆಯ ನಂತರ ಇದು ಕೂಡಲೇ ಬರುತ್ತದೆ. ಯೇಸುವಿನ ಬಗ್ಗೆ ಯೋಹಾನನ ವೃತ್ತಾಂತವು ಆಗ ಈ ಸುವಾರ್ತೆಯಲ್ಲಿ ದಾಖಲೆಯಾದ ಯೇಸುವಿನ ಕೊನೆಯ ಬಹಿರಂಗ ಭಾಷಣದಿಂದ ಮುಂದುವರಿಯುತ್ತದೆ. ಚರ್ಚೆಯ ಕೇಂದ್ರೀ ಕರಿಸುವಿಕೆಯು ಕುರುಡು ತನದಿಂದ ಕುರಿಗಳಿಗೆ ಬದಲಾಗುತ್ತದೆ, ಆದರೆ ಸಂದೇಶವು ಒಂದೇ ರೀತಿಯಲ್ಲಿ ಇರುತ್ತದೆ: ಯೇಸುವು ನಿಜವಾಗಿಯೂ ದೇವರ ಕುಮಾರನಾಗಿರುತ್ತಾನೆ, ಮತ್ತು ಯಥಾರ್ಥವಾದ ಹಾಗೂ ಮೃದುವಾದ ಹೃದಯವುಳ್ಳವರು ಅದನ್ನು ಸ್ವೀಕರಿಸಲು ಬರುತ್ತಾರೆ. ಈ ಅಧ್ಯಯನದಲ್ಲಿ ನಮ್ಮ ಪಠ್ಯದ ಸಂದೇಶವು "ನಾನು ಆಗಿದ್ದೇನೆ" ಎಂದು ಯೇಸು ಹೇಳಿದ ಎರಡು ಹೇಳಿಕೆಗಳ ಮೇಲೆ ಕೇಂದ್ರೀಕರಿಸಲ್ಪಟ್ಟಿರುತ್ತದೆ.

## "ನಾನೇ ಬಾಗಲಾಗಿದ್ದೇನೆ" (10:1-10)

ಯೇಸುವು ಕುರಿಹಟ್ಟಿಯ ಪರಿಚಿತ ಉಪಮೆಯನ್ನು ಉಪಯೋಗಿಸುವದರಿಂದ ಪ್ರಸಂಗವು ಕುರಿ ಮತ್ತು ಕುರುಬರ, ಬಗೆಗಿನ ರೂಪಕದೊಂದಿಗೆ ಪ್ರಾರಂಭವಾಗುತ್ತದೆ (10:1-5). ಕಲ್ಲು ಬಂಡೆಗಳಿಂದ ಇಲ್ಲವೇ ಮುಳ್ಳುಗಳಿಂದ ಮಾಡಲ್ಪಟ್ಟ ಕುರಿಗಳೊಳಗೆ ಕೆಲವು ಸಲ ರಾತ್ರಿಯಲ್ಲಿ ಕುರಿಗಳನ್ನು ತರಲ್ಪಡುತ್ತಿದ್ದವು. ಈ ರೀತಿಯಲ್ಲಿ ಕುರಿಗಳು ಒಟ್ಟಾಗಿ ಇಡುವದು ಅವುಗಳನ್ನು ಕಾಡು ಪ್ರಾಣಿಗಳಿಂದಲೂ ಕಳ್ಳರಿಂದಲೂ ಕಾಪಾಡುವದಕ್ಕೆ ಸುಲಭವಾಗುತ್ತಿತ್ತು. ತಮ್ಮ ಕುರಿಗಳನ್ನು ತೆಗೆದು ಕೊಳ್ಳಲು ಕುರುಬರು ಬಾಗಿಲಿನ ಮುಖಾಂತರ ಪ್ರವೇಶಿಸುವುದು ಹೇಗೆ ನಿಜವಾಗಿದೆ ಎಂಬುದನ್ನು ಯೇಸು ತನ್ನ ಕೇಳುಗರ ಜ್ಞಾಪಕಕ್ಕೆ ತಂದನು. ಅವರು ತಮ್ಮ ಕುರಿಗಳನ್ನು ಹೆಸರು ಹಿಡಿದು ಕರೆಯುವರು ಮತ್ತು ಅವರ ಕುರಿಗಳು ಅವರನ್ನು ಸಂತೋಷ ದಿಂದ ಹಿಂಬಾಲಿಸುವವು. ಇನ್ನೊಂದೆಡೆಯಲ್ಲಿ, ಕಳ್ಳನು, ಕುರಿಗಳನ್ನು ಕದ್ದೊಯ್ಯಲು ಯಾವಾಗಲೂ ಗೋಡೆಗಳನ್ನು ಹಾರಿ ಬರುತ್ತಾನೆ. ಯೇಸುವು ತಾನು ದೇವರ ಜನರನ್ನು ಮೋಸಪಡಿಸಲು ಇಲ್ಲವೇ ವಂಚಿಸಲು ಬಂದಿರುವದಿಲ್ಲವೆಂದು ಹೇಳುತ್ತಿದ್ದನು. ತನ್ನ ಹಿಂಬಾಲಕರನ್ನು ಕೂಡಿಸುವದಕ್ಕಾಗಿ ನೀಚತನದಿಂದಲ್ಲ, ಆದರೆ ಬಹಿರಂಗದಲ್ಲಿ ಸ್ಪಷ್ಟವಾಗಿ ಮಾತಾಡುತ್ತ ಬಾಗಿಲಿನ ಮುಖಾಂತರ ಬಂದಿದ್ದಾನೆ: ಆದಾಗ್ಯೂ ಆ ಸಮಯದಲ್ಲಿ ಆತನ

ಕೇಳುಗರು ಅರ್ಥಮಾಡಿಕೊಳ್ಳಲಿಲ್ಲ (10:6).

ಯೇಸುವು ಪುನಃ ಮಾತಾಡುತ್ತ, "ಕುರಿಗಳಿಗೆ ನಾನೇ ಬಾಗಲಾಗಿದ್ದೇನೆ" (10:7) ಎಂದು ಹೇಳಿದನು. ಇತರರು ತಾವು ದೇವರ ಕುರುಬರಾಗಿದ್ದೇವೆ ಎಂದು ಹೇಳಿಕೊಂಡಿರ ಬಹುದು, ಆದರೆ ಅವರು ಕೇವಲ ಕಳ್ಳರೂ ಸುಲುಕೊಳ್ಳುವವರೂ ಆಗಿದ್ದರು. ದೇವರ ನಿಜವಾದ ಕುರಿಗಳು ಸುಳ್ಳು ಕುರುಬರ ಧ್ವನಿಗಳಿಗೆ ಕಿವಿಗೊಡುವದಿಲ್ಲ, ಮತ್ತು ಯೇಸುವು ತಾನು ದೇವರಿಗೆ ನಿಜ ವಾದ ಬಾಗಲಾಗಿದ್ದೇನೆಂಬುದನ್ನು ಸಾಧಿಸಿದನು. ಇದು ಆತನ ಅನಂತರದ ಹೇಳಿಕೆಯಂತೆ ಕೇಳಿಸುತ್ತದೆ "ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ" (ಯೋಹಾನ 14:6). "ನಾನೇ ಬಾಗಿಲಾಗಿ ದ್ದೇನೆ" ಎಂಬುದು ತಂದೆಗೆ ಒಂದೇ ಒಂದು ಮಾರ್ಗವಾಗಿದ್ದೇನೆ ಎಂದು ಹೇಳಿದಂತಾಗಿರುತ್ತದೆ. ಬೇರೆ ರೀತಿಯಿಂದ ಬರಲು ಪ್ರಯತ್ನಿಸುವವರು ಕಳ್ಳರೂ ಸುಲುಕೊಳ್ಳುವವರೂ ಆಗಿದ್ದಾರೆ. ಬಾರ್ಬರ್ ಶಾಫಿನಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಬಾಲಕನ ಬಗ್ಗೆ ನನಗೆ ತಿಳಿದಿತ್ತು. ಅವನು ಶ್ಯೂ ಪಾಲೀಸ್ ಮಾಡುವ, ನೆಲಗೂಡಿಸುವ ಕೆಲಸ ಮಾಡುತ್ತಿದ್ದನು. ಅಂಗಡಿಯಲ್ಲಿದ್ದ ತಂಪು ಪಾನೀಯ ಮಿಶಿನ್ನಿನಲ್ಲಿ ಎಷ್ಟು ಹಣ ಕೂಡಿಸಲ್ಪಡುತ್ತದೆಂಬದನ್ನು ಅವನು ಗಮನಿಸಿದನು. ಮತ್ತು ಆ ಹಣವನ್ನು ಹೇಗೆ ಕದ್ದು ಕೊಳ್ಳಬೇಕೆಂದು ಯೋಚಿಸಲು ಪ್ರಾರಂಭಿಸಿದನು. ಒಂದು ರಾತ್ರಿ ಮಧ್ಯ ರಾತ್ರಿಯ ನಂತರ ಅವನು ಬಾರ್ಬರ್ ಶ್ಯಾಫಿಗೆ ಹಿಂದಿರುಗಿ ಬಂದನು. ಮಾಳಿಗೆಯ ಮೇಲಿದ್ದ ಬೆಳಕಿಂಡಿಯ ಮೂಲಕ ಒಳಗಿಳಿಯಲು ಪ್ರಯತ್ನಿಸಿದನು. ಬೆಳಕಿಂಡಿಯಲ್ಲಿ ಸಿಕ್ಕಿಕೊಂಡು ಸಮಸ್ಯೆಗೊಳಗಾದನು. ಪೋಲಿಸರು ಅವನನ್ನು ಕಂಡು ಕೊಂಡಾಗ, ಅವನು ಸಹಾಯಕ್ಕಾಗಿ ಬೇಡಿಕೊಂಡನು ಮತ್ತು ತಾನು ಯಾವ ತಪ್ಪನ್ನು ಮಾಡುತ್ತಿರುವದಿಲ್ಲ ವೆಂದು ವಿವರಿಸಲು ಪ್ರಯತ್ನಿಸಿದನು! ಹೀಗಿದ್ದರೂ ಅವನ ಕಥೆಯನ್ನು ಯಾರೂ ನಂಬಲಿಲ್ಲ! ಮುಚ್ಚಿಟ್ಟುಕೊಳ್ಳಲು ಯಾವುದೂ ಇಲ್ಲದ ಪ್ರಾಮಾಣಿಕರ ಜನರು ಮಾಳಿಗೆಯ ಮುಖಾಂತರ ಏರಿ ಹೋಗುವದಿಲ್ಲ; ಅವರು ಬಾಗಿಲಿನ ಮೂಲಕ ಒಳಗೆ ಹೋಗುವರು. ಸುಳ್ಳು ಭೋಧಕರ ಬಗ್ಗೆ ಇದನ್ನೇ ಯೇಸುವು ಹೇಳಿದನು.

ಧರ್ಮದ "ಕೊಳಕಾದ ಚಿಕ್ಕ ರಹಸ್ಯಗಳಲ್ಲಿ" ಒಂದು ಕೆಲವು ಧಾರ್ಮಿಕ ನಾಯಕರು ದೇವರ ಸಂಗತಿಗಳಲ್ಲಿ ನಿಜವಾಗಿಯೂ ಆಸಕ್ತಿಯಿಲ್ಲದಿರುವುದಾಗಿದೆ. ಕೆಲವರು ತಮ್ಮ ಹಣದ, ಸ್ಥಾನದ ಇಲ್ಲವೇ ಅಧಿಕಾರದ ಆಶೆಯನ್ನು ತೃಪ್ತಿಪಡಿಸಿಕೊಳ್ಳುವದಕ್ಕಾಗಿ ಸಭೆಗೆ ಸಂಬಂಧಿಸಿದ ಸಂಗತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಪ್ರತೀಸಲ ಒಂದು ಹೊಸ ಅಪನಿಂದೆಯು ವರದಿಮಾಡಲ್ಪಡುವಾಗ, ಸಭಾನಾಯಕನು ಆ ರೀತಿಯಲ್ಲಿ ವರ್ತಿಸುವದಕ್ಕೆ ಆಘಾತಕ್ಕೊಳಗಾಗುತ್ತೇವೆ. ಕುರಿ ಹಿಂಡನ್ನು ತೆಗೆದು ಕೊಂಡು ಹೋಗುವವದರ ಬಗ್ಗೆ ಎಂದಾದರೂ ಆಶ್ಚರ್ಯಭರಿತನಾದನೆಂದು ನಾನು ನಂಬುವದಿಲ್ಲ. ಆತನು ಕುರಿಹಿಂಡನ್ನು ಬಯಸಿದ್ದನ್ನು ತಾನು ಮಾತ್ರವೇ ಅಲ್ಲ, ತಾನು ನಿಜವಾದ ಕುರುಬನೆಂದೂ ಮತ್ತು ಮಾತ್ರವೇ ಕುರಿಮಂದೆಯ ಅತ್ಯುತ್ತಮವಾದ ಆಸಕ್ತಿಯ ಬಗ್ಗೆ ಚಿಂತಿಸುವಾತನು ಎಂಬುದನ್ನೂ ಬಲ್ಲವನಾಗಿದ್ದನು, "ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿ ಯಾಗಿರಬೇಕೆಂತಲೂ ಬಂದನು" (10:10ಬಿ) ಎಂದು ಆತನು ಹೇಳಿದನು.

ಯೋಹಾನನ ಸುವಾರ್ತೆಯಲ್ಲೆಲ್ಲಾ, ಯೇಸುವು ಬಾಗಲಿನಿಂದ ಪ್ರವೇಶಿಸುವವನಂತೆ ತೋರಿಸ ಲ್ಪಟ್ಟಿದ್ದಾನೆ. ಆತನ ಸೇವೆಯು ಕೈಚಳಕವನ್ನಾಗಲಿ, ಕುಯುಕ್ತಿಯನ್ನಾಗಲಿ ಇಲ್ಲವೇ ಮೋಸ ತನವನ್ನಾಗಲೀ ಒಳಗೊಂಡಿರಲಿಲ್ಲ. ಸ್ವಾರ್ಥಸಾಧನೆಯೂ ಇರಲಿಲ್ಲ. ಆತನ ಮಾತುಗಳು ಬಹಳ ವಾಗ್ವಾದಗಳಿಗೆ ಕಾರಣವಾದರೂ ಕೊನೆಗೆ ಆತನು ತನ್ನ ಜೀವವನ್ನು ಕ್ರಮವಾಗಿ ಕೊಡಬೇಕಾಯಿತು, ಯೇಸುವು "ಬಾಗಲಿನ" ಮುಖಾಂತರ ನಡೆಯುವದನ್ನು ಒತ್ತಿ ಹೇಳಿ ದನು. ಜಗತ್ತಿನ ಉಳಿದವರು ಏನೇ ಮಾಡಿದರೂ, ದೇವರ ಕಡೆಗೆ ತಮ್ಮ ಹೃದಯಗಳನ್ನು ತಿರುಗಿಸಿಕೊಂಡವರು ತನ್ನ ಧ್ವನಿಯನ್ನು ಕೇಳುವರೆಂದು ಆತನು ಬಲ್ಲವನಾಗಿದ್ದನು.

ಮೊದಲನೆಯ ಜಾಗತಿಕ ಮಹಾಯುದ್ಧದ ಸಮಯದಲ್ಲಿ, ಹಸಿವೆಗೊಂಡಿದ್ದ, ಇಸ್ರಾಯೇಲಿನಲ್ಲಿ ಇಡಲ್ಪಟ್ಟಿದ್ದ ಟರ್ಕಿಶ್ ಸೈನಿಕರು ಒಂದು ಗುಂಪು ಒಂದು ಕುರಿ ಹಿಂಡನ್ನು ನೋಡಿತು. ಅವರು ಕುರಿಗಳನ್ನು ತಮ್ಮ ಕ್ಯಾಂಪಿನ ಕಡೆಗೆ ಓಡಿಸಲು ಪ್ರಾರಂಭಿಸಿದರು. ಇದರಿಂದ ಒಳ್ಳೇ ಔತಣ ಮಾಡಬಹುದೆಂದು ಯೋಚಿಸಿದರು. ಕುರಿಗಳನ್ನು ಕಾಯುತ್ತಿದ್ದ ಬಡ ಕುರುಬನು ಸೈನಿಕರೊಂದಿಗೆ ಹೋರಾಡಲು ಆಯುಧಗಳನ್ನು ಹೊಂದಿಕೊಂಡಿರಲಿಲ್ಲ. ಆದುದರಿಂದ ಅವನು ವಿರುದ್ಧ ದಿಕ್ಕಿಗೆ ಓಡಿ ಹೋಗಿ ಒಂದು ಸಮೀಪದ ದಿನ್ನೆಯ ಮೇಲೆ ನಿಂತು ಕೊಂಡನು. ಆಗ ಅವರು ತಿರುಗಿ, ತನ್ನ ಬಾಯಿಗೆ ತನ್ನ ಮುಂಗೈಗಳನ್ನು ಜೋಡಿಸಿ ಹಿಡಿದು ಕೊಂಡು, ಆಗಾಗ ತನ್ನ ಕುರಿಗಳನ್ನು ಕರೆಯುತ್ತಿದ್ದಂತೆ, ಗಟ್ಟಿಯಾಗಿ ಕೂಗಿದನು. ಕೂಡಲೇ ಆ ಪ್ರಾಣಿಗಳು ಸೈನಿಕರೊಂದಿಗೆ ಹೋಗುವದನ್ನು ನಿಲ್ಲಿಸಿ, ತಮ್ಮ ಕುರುಬನಿದ್ದ ಕಡೆಗಿನ ದಿಕ್ಕಿಗೆ ಓಡಲು ಪ್ರಾರಂಭಿಸಿದವು. ತಮ್ಮ "ಭೋಜನವು" ಕತ್ತಲೆಯಲ್ಲಿ ಮರೆಯಾಗಿ ಹೋಗುವದನ್ನು ತಪ್ಪಿಸಲಿಕ್ಕೆ ಸೈನಿಕರು ಏನನ್ನು ಮಾಡಲಾಗದಷ್ಟು ಆಶ್ಚರ್ಯಚಕಿತರಾದರು.[1]

ಇದು ಇಂದು ಯೇಸುವಿಗೆ ಆತನ ಕುರಿಗಳೊಂದಿಗಿರುವ ಸಂಬಂಧವನ್ನು ಕುರಿಗಳು ಆತನ ಸ್ವರಕ್ಕೆ ಕಿವಿಗೊಡುವವು. ದೇವರನ್ನು ನಿಜವಾಗಿ ಹುಡುಕುವವರು ಆತನ ಕರೆಯನ್ನು ಗುರುತಿಸುವರು ಹಾಗೂ ಆತನನ್ನು ಕಂಡುಕೊಳ್ಳುವರು. ಆತನು ಅವರಿಗೆ ಸಮೃದ್ಧ ಜೀವವನ್ನು ಕೊಡುವನು "ಜೀವ"ವು ಯೋಹಾನನ ಸುವಾರ್ತೆಯಲ್ಲಿ ಕೇಂದ್ರೀಕೃತ ಅಂಶವಾಗಿರುತ್ತದೆ (20:31). ಅದು ನಾವು ಬಹಳ ಸಲ ಹುಡುಕುವ "ಒಳ್ಳೆಯ ಜೀವನ" ಇಲ್ಲವೇ "ಸುಲಭವಾದ ಜೀವನ" ಆಗಿರುವದಿಲ್ಲ; ಆತನ ಸ್ವರವನ್ನು ಕೇಳುವವರಿಗೆ ಯೇಸುವು ಕೊಡುವ "ಸಮೃದ್ಧ ಜೀವ" ಆಗಿರುತ್ತದೆ.

## "ನಾನೇ ಒಳ್ಳೇ ಕುರುಬನು" (10:11-18)

ಬಾಗಲಾಗಿರುವೆನೆಂಬ ಯೇಸುವಿನ ಹೇಳಿಕೆಗೆ ಸಂಬಂಧಿಸಿ, ಆದರೆ ಅದಕ್ಕಿಂತ ಭಿನ್ನವಾದ, "ನಾನೇ ಒಳ್ಳೇ ಕುರುಬನು" (10:11ಎ) ಎಂಬ ಯೇಸುವಿನ ಘೋಷಣೆ ಇರುವುದು. ಮೊದಲು ಹೇಳಲ್ಪಟ್ಟಂತೆ "ಕುರುಬ" ಎಂಬುದಕ್ಕೆ ಭಿನ್ನವಾದ ಅರ್ಥಗಳಿರುತ್ತವೆ. ಈ ಸಂದರ್ಭದಲ್ಲಿ, ಯೇಸುವಿನ ಮನಸ್ಸಿನಲ್ಲಿ ಒಂದು ಪ್ರತ್ಯೇಕವಾದ ಅರ್ಥವಿತ್ತು: "ಒಳ್ಳೆ ಕುರುಬನು ತನ್ನ ಕುರಿಗಳಿಗೋಸ್ಕರ ತನ್ನ ಪ್ರಾಣವನ್ನು ಕೊಡುತ್ತಾನೆ" (10:11ಬಿ). ಶಿಲುಬೆಯ ಮೇಲಿನ ಆತನ ಮರಣವು ಯೋಹಾನನ ಸುವಾರ್ತೆಯಲ್ಲಿ ಒಂಭತ್ತಕ್ಕಿಂತಲೂ ಹೆಚ್ಚು ಅಧ್ಯಾಯಗಳಲ್ಲಿ ದಾಖಲಿಸಲ್ಪಡದಿದ್ದರೂ, ಯೇಸುವು ಈಗಾಗಲೇ ಶಿಲುಬೆಯ ಅರ್ಥವೇನೆಂಬುದರ ಬಗ್ಗೆ ತನ್ನ ಶಿಷ್ಯರಿಗೆ ಹೇಳುತ್ತಿದ್ದಾನೆ. ಒಳ್ಳೇಯ ಕುರುಬನಂತೆ, ಆತನು ಕುರಿಗಳಿಗಾಗಿ ತನ್ನ ಪ್ರಾಣವನ್ನು ಕೊಡಲು ಇಷ್ಟವುಳ್ಳವನೂ ಸಿದ್ಧನೂ ಆಗಿರುತ್ತಾನೆ. ಐದು ಸಲ ಈ ಚಿಕ್ಕ ಭಾಗದಲ್ಲಿ ಆತನು ತನ್ನ ಮರಣವು ತನ್ನ ನಿಯಂತ್ರಣವನ್ನು ದಾಟಿ ಇರುವಂಥದ್ದಲ್ಲವೆಂದು ಒತ್ತಿ ಹೇಳಿದ್ದಾನೆ. ಆತನು ಮರಣ ಹೊಂದಿದಾಗ, ಅದು ಆತನು ತನ್ನ ಜೀವವನ್ನು ಕೊಡುವದನ್ನು ಆಯ್ಕೆ ಮಾಡಿಕೊಂಡದ್ದರಿಂದಾಗಿತ್ತು!

> "... ಒಳ್ಳೇ ಕುರುಬನು ತನ್ನ ಕುರಿಗಳಿಗೋಸ್ಕರ ತನ್ನ ಪ್ರಾಣವನ್ನು ಕೊಡುತ್ತಾನೆ" (10:11).
>
> "... ಮತ್ತು ಕುರಿಗಳಿಗೋಸ್ಕರ ನನ್ನ ಪ್ರಾಣವನ್ನು ಕೊಡುತ್ತೇನೆ" (10:15).
>
> "... ನಾನು ತಿರಿಗಿ ಪಡಕೊಳ್ಳುತ್ತೇನೆಂದು ನನ್ನ ಪ್ರಾಣವನ್ನು ಕೊಡುತ್ತೇನೆ" (10:17).
>
> "ನನ್ನ ಪ್ರಾಣವನ್ನು ಯಾರೂ ನನ್ನಿಂದ ತೆಗೆಯರು, ನನ್ನಷ್ಟಕ್ಕೆ ನಾನೇ ಅದನ್ನು ಕೊಡುತ್ತೇನೆ" (10:18ಎ).

> "ಅದನ್ನು ಕೊಡುವದಕ್ಕೆ ನನಗೆ ಅಧಿಕಾರ ಉಂಟು, ಅದನ್ನು ತಿರಿಗಿ ಪಡಕೊಳ್ಳುವದಕ್ಕೆ ನನಗೆ ಅಧಿಕಾರ ಉಂಟು" (10:18ಬಿ).

ಒಬ್ಬನು ತನ್ನ ಪ್ರಾಣವನ್ನು ಕೊಡುವುದು ಒಳ್ಳೇ ಕುರುಬನ ಅಂತಿಮ ಪ್ರದರ್ಶನವಾಗಿರುತ್ತಿತ್ತು. ಕೂಲಿಯಾಳುಗಳು ಈ ನಿಷ್ಠೆಯನ್ನೂ ಮತ್ತು ತ್ಯಾಗವನ್ನು ತೋಲಿಸುವದಿಲ್ಲ. ತೊಂದರೆಯು ಬರುವಾಗ ಅವರು ಕುರಿಗಳನ್ನು ಮರೆತು ಅಡಗಿ ಕೊಳ್ಳುತ್ತಾರೆ.

ದಾವೀದನು (ಅನಂತರದಲ್ಲಿ ಇಸ್ರಾಯೇಲಿನ ಅರಸನಾದವನು) ತನ್ನ ಯೌವನ ಪ್ರಾಯದಲ್ಲಿ ಒಬ್ಬ ಕುರುಬನಾಗಿದ್ದನು. ಆಸ್ಥಾನದಲ್ಲಿ ಅವನು ಜೀವನ, ನಾಯಕತ್ವ ಮತ್ತು ದೇವರ ಬಗ್ಗೆ ಬಹಳಷ್ಟನ್ನು ಕಲಿತುಕೊಂಡನು. ಅವನು ವಿಶೇಷವಾಗಿ ಒಳ್ಳೇ ಕುರುಬನಾಗಿರುವಂಥದ್ದರ ಬಗ್ಗೆ ಕಲಿತುಕೊಂಡನು. ಫಿಲಿಷ್ಟಿಯ ದೈತ್ಯನಾದ ಗೊಲ್ಯಾತನೊಂದಿಗೆ ಹೋರಾಡಲು ಮುಂದೆ ಬಂದಾಗ ದಾವೀದನು ಸೌಲನಿಗೆ ಹೀಗೆ ಹೇಳಿದನು:

> ನಿನ್ನ ಸೇವಕನಾದ ನಾನು ನನ್ನ ತಂದೆಯ ಕುರಿಗಳನ್ನು ಕಾಯುತ್ತಿದ್ದಾಗ ಸಿಂಹವಾಗಲಿ ಕರಡಿಯಾಗಲಿ ಒಂದು ಹಿಂಡಿನಲ್ಲಿನ ಕುರಿಮರಿಯನ್ನು ಹಿಡಿದುಕೊಂಡು ಹೋಗಲು ನಾನು ಒಡನೆ ಅದನ್ನು ಬೆನ್ನಟ್ಟಿ ಹೊಡೆದು ಕುರಿಮರಿಯನ್ನು ಕಿತ್ತುಕೊಳ್ಳುತ್ತಿದ್ದೆನು. ಅದು ಹಿಂದಿರುಗಿ ನನ್ನ ಮೇಲೆ ಬಿದ್ದರೆ ಅದನ್ನು ಗದ್ದ ಹಿಡಿದು ಬಡಿದು ಕೊಂದು ಹಾಕುತ್ತಿದ್ದೆನು. ನಿನ್ನ ಸೇವಕನಿಂದ ಕೊಲ್ಲಲ್ಪಟ್ಟ ಸಿಂಹಕ್ಕೂ ಕರಡಿಗೂ ಆದ ಗತಿಯೇ ಜೀವಸ್ವರೂಪನಾದ ದೇವರ ಸೈನ್ಯವನ್ನು ನಿಂದಿಸುವಂಥ ಈ ಸುನ್ನತಿಯಿಲ್ಲದ ಫಿಲಿಷ್ಟಿಯನಿಗೂ ಆಗಬೇಕು ... (1 ಸಮುವೇಲನು 17:34-36).

ಇಸ್ರಾಯೇಲಿನ ಭವಿಷ್ಯದ ಅರಸನು ಕುರಿಗಳೊಂದಿಗೆ ತನ್ನನ್ನು ನಂಬಿಗಸ್ತನೂ ಒಳ್ಳೇ ಕುರುಬನೂ ಆಗಿ ರುಜುವಾತು ಪಡಿಸಿಕೊಂಡನು; ಅನಂತರದಲ್ಲಿ ಅವನು ದೇವರ ಜನಾಂಗದ ಮೇಲೆ ನಂಬಿಗಸ್ತ ಕುರುಬನಾಗಿ ರುಜುವಾತು ಪಡಿಸಿಕೊಳ್ಳುವನು.

ಯೇಸುವು ಸುವಾರ್ತೆಗಳಲ್ಲಿ ಬಹಳಷ್ಟು ಸಲ "ದಾವೀದನ ಕುಮಾರನು" ಎಂದು ಕರೆಯಲ್ಪಟ್ಟಾತನು, ಒಳ್ಳೇಯ ಕುರುಬನಾಗಿದ್ದನು ಮತ್ತು ಆಗಿರುತ್ತಾನೆ. ದಾವೀದನು ತನ್ನ ಕುರಿಹಿಂಡಿಗೆ ಮಾಡಿದಂತೆ ಯೇಸುವು ನಮಗಾಗಿ ತನ್ನ ಪ್ರಾಣವನ್ನು ಕೊಡುವಷ್ಟರ ಮಟ್ಟಿಗೆ, ಆತನು ತನ್ನ ಜೋಪಾಸನೆಗೆ ಒಪ್ಪಿಸಲ್ಪಟ್ಟ ಕುರಿಗಳ ಪೋಷಣೆ ಹಾಗೂ ಕ್ಷೇಮಾಭಿವೃದ್ಧಿಗಾಗಿ ಆತನು ಸಮರ್ಪಿಸಿಕೊಂಡಿದ್ದನು. ಒಳ್ಳೇ ಕುರುಬನಂತೆ ಮಾತಾಡುತ್ತ, ಯೇಸುವು "ತನ್ನ ಸ್ವೇಚ್ಛೆಯಿಂದ" ತಾನು ಶಿಲುಬೆಗೆ ಹೋಗುವೆನೆಂದು ಸ್ಪಷ್ಟಪಡಿಸಿದನು (10:18). ಯೂದನು, ಪ್ರಧಾನ ಯಾಜಕರು, ಪಿಲಾತನು ಮತ್ತು ಜನರ ಗುಂಪುಗಳು ಯೇಸುವಿನ ಶಿಲುಬೆಗೆ ಹಾಕಲ್ಪಡುವದರಲ್ಲಿ ಭಾಗಿಗಳಾಗಿದ್ದಾರೆ, ಆದರೆ ಯೇಸುವು ಕುರಿಗಳಿಗಾಗಿ ತನ್ನ ಪ್ರಾಣವನ್ನು ಆತನು ಕೊಡಲು ಸಿದ್ಧನಾಗಿದ್ದುದರಿಂದ ಅಂಥ ಹೀನಕಾರ್ಯವು ಸಂಭವಿಸುವುದೆಂದು ಅವರು ಅರ್ಥಮಾಡಿಕೊಳ್ಳಲಿಲ್ಲ. ಆತನು ಒಳ್ಳೇಯ ಕುರುಬನಾಗಿದ್ದಾನೆ!

ಅನಂತರ ಯೋಹಾನನ ಸುವಾರ್ತೆಯಲ್ಲಿ, ಯೇಸುವು ತನ್ನ ಒಳ್ಳೇ ಕುರುಬನ ಸಂಭಾಷಣೆಯಲ್ಲಿ ಹೇಳಿದ ಎರಡು ಹೇಳಿಕೆಗಳು ನಮ್ಮನ್ನು ಜ್ಞಾಪಕಕ್ಕೆ ತರುತ್ತವೆ. ಯೇಸುವಿನ ನ್ಯಾಯ ವಿಚಾರಣೆಯ ಸಮಯದಲ್ಲಿ, ರೋಮನ್ ದೇಶಾಧಿಪತಿ ಪಿಲಾತನು ಯೇಸುವಿಗೆ ಒಂದು ಪ್ರಶ್ನೆಯನ್ನು ಕೇಳಿದನು. ಆತನು ಉತ್ತರ ಕೊಡಲು ನಿರಾಕರಿಸಿದಾಗ, ಪಿಲಾತನು, "ನನ್ನ ಸಂಗಡಲೂ ನೀನು ಮಾತಾಡುವದಿಲ್ಲವೋ? ನಿನ್ನನ್ನು ಬಿಡಿಸುವ ಅಧಿಕಾರವೂ ನಿನ್ನನ್ನು ಶಿಲುಬೆಗೆ ಹಾಕಿಸುವ ಅಧಿಕಾರವೂ ನನಗೆ ಉಂಟೆಂಬುದು ನಿನಗೆ ಗೊತ್ತಿಲ್ಲವೋ?" ಎಂದು ಕೇಳಿದನು (19:10). ಒಳ್ಳೇ ಕುರುಬನಾದ ಯೇಸುವು, "ಮೇಲಣಿಂದ ನಿನಗೆ ಕೊಡಲ್ಪಡದಿದ್ದರೆ ನನ್ನ ಮೇಲೆ ನಿನಗೆ ಯಾವ ಅಧಿಕಾರವೂ ಇರುತ್ತಿರಲಿಲ್ಲ ..." (19:11) ಎಂದು ಉತ್ತರ ಕೊಟ್ಟನು. ಆ

ಸಮಯದಲ್ಲಿ ಯಾರೂ ಅರ್ಥಮಾಡಿಕೊಳ್ಳದಿದ್ದರೂ, ಯೇಸುವು ಪಿಲಾತನಿಗೆ ಹಾಗೆ ಮಾಡಲು ಬಿಟ್ಟು ಕೊಟ್ಟಿರದಿದ್ದರೆ, ಪಿಲಾತನು ಎಂದೂ ಯೇಸುವನ್ನು ಶಿಲುಬೆಗೆ ಹಾಕಿಸುತ್ತಿರಲಿಲ್ಲ; ಶಿಲುಬೆಗೆ ಹಾಕಲ್ಪಡುವುದು ನಿಜವಾಗಿಯೂ ಒಳ್ಳೆ ಕುರುಬನ ಪ್ರೀತಿಯ ಯಜ್ಞವಾ ಗಿದೆ! ಅಂತ್ಯದಲ್ಲಿ, ಯೇಸುವು ಶಿಲುಬೆಯ ಮೇಲೆ ನೇತಾಡುತ್ತಿದ್ದಾಗ, "ಆತನು ತಲೆಬಾಗಿಸಿ ಆತ್ಮವನ್ನು ಒಪ್ಪಿಸಿಕೊಟ್ಟನು" (19:30). ಯೋಹಾನನ ಪದ ರಚನೆಯಲ್ಲಿ ಆಕಸ್ಮಿಕವಿರುವದಿಲ್ಲ. ಯೇಸುವಿನ ಜೀವವನ್ನು ಆತನಿಂದ ಯಾರೂ ಎಳೆದುಕೊಳ್ಳಲಿಲ್ಲ. ಯಾರೂ ಮೋಸಮಾಡಲಿಲ್ಲ ಮತ್ತು ಬಲೆಯಲ್ಲಿ ಹಾಕಲಿಲ್ಲ. ಆತನು ತನ್ನ ಆತ್ಮವನ್ನು ತಾನೇ ಒಪ್ಪಿಸಿ ಕೊಟ್ಟನು.

## ಮುಕ್ತಾಯ (10:19, 20)

ಪುನಃ ಯೇಸುವಿನ ಅದ್ಭುತಕರವಾದ ಮಾತುಗಳು ಜನರಲ್ಲಿ ವಿಭಜನೆಯನ್ನು ತಂದದ್ದನ್ನು ನೋಡುತ್ತೇವೆ. ಕೆಲವರು ಆತನಿಗೆ ದೆವ್ವಹಿಡಿದಿದೆ ಅಂದುರು, ಆತನಲ್ಲಿ ಅಪನಂಬಿಕೆ ಹುಟ್ಟಿಸುವ ಅಪವಾದವಾಗಿತ್ತು. ಇಂದು ಒಬ್ಬನು "ಹುಚ್ಚನಾಗಿದ್ದಾನೆ" ಇಲ್ಲವೇ "ಮಾನಸಿಕ ವಾಗಿ ತೊಂದರೆಗೆ ಒಳಗಾಗಿದ್ದಾನೆ" ಎಂದು ಹೇಳುವ ರೀತಿಯಲ್ಲಿ ಇತ್ತು. ಹೀಗಿದ್ದರೂ, ಇತರರು, ಹುಟ್ಟು ಕುರುಡನ ಕಣ್ಣುಗಳನ್ನು ತೆರೆಯುವಲ್ಲಿ ಆತನು ಬಲವಾದ ಅದ್ಭುತಕಾರ್ಯದ ಬಗ್ಗೆ ಇನ್ನೂ ಆಶ್ಚರ್ಯಚಕಿತರಾಗಿದ್ದರು. ಅಂಥ ಅಗ್ರಾಹ್ಯವಾದ, ಅದ್ಭುತಕರವಾದ ಕಾರ್ಯವನ್ನು ಒಂದು ದೆವ್ವವು ಮಾಡುವದೆಂಬುದನ್ನು ಅವರು ನಂಬಲಾರದೇ ಹೋದರು. ಯೇಸುವು ತನ್ನ ಎಲ್ಲಾ ಕುರಿಗಳನ್ನು ಪ್ರೀತಿಸಿದಾಗ್ಯೂ, ಅವುಗಳಲ್ಲಿ ಕೆಲವರು ಪ್ರತಿಯಾಗಿ ಆತನನ್ನು ಪ್ರೀತಿಸಿದರು ಹಾಗೂ ಇತರರು ಆತನನ್ನು ದ್ವೇಷಿಸಿದರು. ಅವರ ಪ್ರತಿಕ್ರಿಯೆಯು ಯೇಸುವು ನಮ್ಮನ್ನು ತನ್ನನ್ನು ಹಿಂಬಾಲಿಸಲು ಕರೆಯುತ್ತಾನೆ. ಆದರೆ ತೀರ್ಮಾನವನ್ನು ನಮಗೆ ಬಿಡುತ್ತಾನೆ. ಎಂಬುವದನ್ನು ನಮ್ಮ ಜ್ಞಾಪಕಕ್ಕೆ ತರುತ್ತದೆ.

ಯೇಸುವು ಒಳ್ಳೇ ಕುರುಬನಾಗಿದ್ದಾನೆ. ಆತನ ಕುರಿಗಳು ಆತನ ಸ್ವರವನ್ನು ತಿಳಿದಿರುತ್ತವೆ ಮತ್ತು ಆತನನ್ನು ಹಿಂಬಾಲಿಸುತ್ತವೆ. ಇಂದು ಆತನು ಸಮೀಪದ ದಿನ್ನೆಯ ಮೇಲೆ ನಿಂತುಕೊಂಡು ನಿನ್ನ ಹೆಸರನ್ನು ಕರೆಯುತ್ತಾನೆ. ಆತನ ಧ್ವನಿಯನ್ನು ನೀನು ಕೇಳಿಸಿಕೊಳ್ಳುತ್ತಿರುವೆಯೋ? ಆತನ ಧ್ವನಿಯನ್ನು ನೀನು ಗುರುತಿಸುವಿಯೋ? ನೀನು ಆತನನ್ನು ಹಿಂಬಾಲಿಸುವಿಯೇ? ಆತನು ತನ್ನ ಪ್ರಾಣವನ್ನು ನಿನಗಾಗಿ ಅರ್ಪಿಸಿದನೆಂಬುದನ್ನು ಜ್ಞಾಪಿಸಿಕೋ!

---

ಟಿಪ್ಪಣಿ

[1]Michael Green, *Illustrations for Biblical Preaching* (Grand Rapids, Mich.: Baker Book House, 1982), 420.